ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 573
ಉತ್ತರಿಸಬೇಕಾದ ದಿನಾಂಕ : 17.12.2021
ಸದಸ್ಯರ ಹೆಸರು : ಡಾ. ತೇಜಸ್ವಿನಿ ಗೌಡ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ. ಸ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳಲ್ಲಿ ಸುಸಜ್ಜಿತ ಕ್ರೀಡಾಂಗಣಗಳಿವೆಯೇ; ಇಲ್ಲದಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು; ಬೇಕಿರುವ ಮೊತ್ತವೆಷ್ಟು; (ಅಂಕಿ ಅಂಶಗಳ ಮಾಹಿತಿ ನೀಡುವುದು)	ರಾಜ್ಯದ 235 ತಾಲ್ಲೂಕುಗಳ ಪೈಕಿ 120 ತಾಲ್ಲೂಕುಗಳಲ್ಲಿ ಕ್ರೀಡಾಂಗಳನ್ನು ನಿರ್ಮಿಸಲಾಗಿದೆ. ಅಲ್ಲದೇ, 29 ಜಿಲ್ಲಾ ಕ್ರೀಡಾಂಗಣಗಳು ತಾಲ್ಲೂಕು ಕ್ರೀಡಾಂಗಣಗಳೂ ಆಗಿರುತ್ತವೆ ; 4 ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದಂತೆ, 78 ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಬೇಕಾಗಿರುತ್ತದೆ. ಈ ಪೈಕಿ 12 ಸ್ಥಳಗಳಲ್ಲಿ ನಿವೇಶನ ಲಭ್ಯವಿದ್ದು, ಇತರೆಡೆಗಳಲ್ಲಿ ಸೂಕ್ತ ನಿವೇಶನ ಗುರುತಿಸಿ, ಇಲಾಖೆಗೆ ಪಡೆಯಬೇಕಾಗಿದೆ. 78 ತಾಲ್ಲೂಕು ಕ್ರೀಡಾಂಗಣಕ್ಕೆ ತಲಾ ರೂ. 5.00 ಕೋಟಿಗಳಂತೆ ಒಟ್ಟು 390.00 ಕೋಟಿಗಳ ಅವಶ್ಯಕತೆ ಇರುತ್ತದೆ.
ಆ)	ದೇಶೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಭಾರತೀಯ ಕ್ರೀಡಾ ಪಟುಗಳು ಸಾಧನೆಗೈಯುತ್ತಿರುವಾಗ, ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲು ಇಲಾಖೆ ಯಾವ ಪ್ರಯತ್ನ ಮಾಡಿದೆ; (ವಿವರ ನೀಡುವುದು)	ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲು ಪ್ರತಿ ವರ್ಷ ತಾಲ್ಲೂಕು ಮಟ್ಟದ ಕ್ರೀಡಾ ವಸತಿ ನಿಲಯ ಆಯ್ಕೆ ಶಿಬಿರಗಳನ್ನು ಆಯೋಜಿಸಲಾಗುತ್ತಿದ್ದು, ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಕ್ರೀಡಾ ವಸತಿ ನಿಲಯಗಳಿಗೆ ಪ್ರವೇಶ ನೀಡಲಾಗುತ್ತಿದೆ. ಕ್ರೀಡಾ ವಸತಿ ನಿಲಯಗಳಲ್ಲಿ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ/ದಿನಭತ್ಯೆ ನೀಡಲಾಗುತ್ತಿದೆ. ಉತ್ತಮ ಸಾಧನೆ ದಾಖಲಿಸುವ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲಾಗುತ್ತಿದೆ. ಅಲ್ಲದೇ, ಗ್ರಾಮೀಣ ಭಾಗದ ಕ್ರೀಡಾಪಟುಗಳು ಇತರೆ ಕ್ರೀಡಾಪಟುಗಳಂತೆ ಇಲಾಖೆಯ ಕಾರ್ಯಕ್ರಮಗಳಾದ ಕ್ರೀಡಾ ವಿದ್ಯಾರ್ಥಿ ವೇತನ, ಶೈಕ್ಷಣಿಕ ಶುಲ್ಕ ಮರುಪಾವತಿ, ಪದಕ ವಿಜೇತ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ, ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರಗಳಿಗೆ ಅರ್ಹರಾಗಿರುತ್ತಾರೆ.

ಇ)	ಮಹಿಳಾ ಕ್ರೀಡಾಪಟುಗಳು ಯಾವ ಯಾವ ಕ್ರೀಡೆಗಳಲ್ಲಿ ಸಾಧನಾ ಸಾಮರ್ಥ್ಯ ತೋರಿದ್ದಾರೆ; ಅವರಿಗೆ ಬೇಕಿರುವ ಇತರೆ ಸೌಲಭ್ಯ, ಉನ್ನತ ತರಬೇತಿ ವ್ಯವಸ್ಥೆ ಮಾಡಲಾಗಿದೆಯೇ; (ವಿವರ ನೀಡುವುದು)	ಮಹಿಳಾ ಕ್ರೀಡಾಪಟುಗಳು, ಅಥ್ಲೆಟಿಕ್ಸ್, ಬ್ಯಾಸ್ಕೆಟ್ ಬಾಲ್, ವಾಲಿಬಾಲ್, ಹಾಕಿ, ಜುಡೋ, ಫೆನ್ಸಿಂಗ್, ಕುಸ್ತಿ, ಈಜು, ಟೇಬಲ್ ಟೆನ್ನಿಸ್, ಲಾನ್ ಟೆನ್ನಿಸ್, ಬ್ಯಾಡ್ಮಿಂಟನ್, ವುಶು, ನೆಟ್ ಬಾಲ್, ಸ್ನೂಕರ್, ರೋಲರ್ ಸ್ಕೆಟಿಂಗ್, ಫುಟ್ಬಾಲ್, ಕ್ರಿಕೆಟ್ ಕ್ರೀಡೆಗಳಲ್ಲಿ ಸಾಧನಾ ಸಾಮರ್ಥ್ಯ ತೋರಿರುತ್ತಾರೆ. ಮಹಿಳಾ ಕ್ರೀಡಾಪಟುಗಳ ತರಬೇತಿಗಾಗಿ ಅಂತರಾಷ್ಟ್ರೀಯ ಗುಣಮಟ್ಟದ 15 ಸಿಂಥೆಟಿಕ್ಸ್ ಅಥ್ಲೆಟಿಕ್ಸ್ ಟ್ರ್ಯಾಕ್ ಗಳನ್ನು (ಬೆಂಗಳೂರು ನಗರ,-2, ಬೆಳಗಾವಿ-1, ಚಿತ್ರದುರ್ಗ-2, ದಕ್ಷಿಣ ಕನ್ನಡ-2, ಧಾರವಾಡ-1, ಗದಗ-1, ಕಲಬುರ್ಗಿ-1, ಕೊಡಗು-1, ಮೈಸೂರು-1, ಶಿವಮೊಗ್ಗ-1, ಉಡುಪಿ-1, ಚಾಮರಾಜನಗರ-1 ಮತ್ತು ಬಿಜಾಪುರ-1) 5 ಸಿಂಥೆಟಿಕ್ ಹಾಕಿ ಕ್ರೀಡಾಂಗಣ (ಬೆಂಗಳೂರು ನಗರ-1, ಕೊಡಗು-3 ಮೈಸೂರು-1,) ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಸಿಂಥೆಟಿಕ್ ಫುಟ್ಬಾಲ್ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಮಹಿಳಾ ಕ್ರೀಡಾಪಟುಗಳಿಗೆ ವಿಶೇಷವಾಗಿ ಬಟ್ಟೆ ಬದಲಾಯಿಸುವ ಕೊಠಡಿ, ಪ್ರತ್ಯೇಕ ಶೌಚಾಲಯದ ವ್ಯವಸ್ಥೆಗಳನ್ನು ರಾಜ್ಯದ ಎಲ್ಲಾ ಕ್ರೀಡಾಂಗಣಗಳಲ್ಲಿ ಕಲ್ಪಿಸಲಾಗಿದೆ.
ಈ)	ಇಲಾಖೆಗೆ ರಾಜ್ಯದಾದ್ಯಂತ ಅವಶ್ಯವಿರುವ ಕ್ರೀಡಾ ತರಬೇತುದಾರರ ಸಂಖ್ಯೆ ಎಷ್ಟು; ಖಾಲಿ ಎಷ್ಟು ಸ್ಥಾನಗಳಿವೆ; ಯಾವಾಗ ಈ ಸ್ಥಾನಗಳಿಗೆ ನೇಮಕಾತಿ ಭರ್ತಿ ಕಾರ್ಯ ನಡೆಯಲಿದೆ;	ಪ್ರಸ್ತುತ, 121 ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದು, 50 ತರಬೇತುದಾರರನ್ನು ಮಾಸಿಕ ಸಂಚಿತ ವೇತನದಡಿಯಲ್ಲಿ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಸಮಗ್ರವಾಗಿ ಪರಿಷ್ಕರಿಸಲು ಪ್ರಸ್ತಾಪಿಸಿದ್ದು, ಅದರಲ್ಲಿ ತರಬೇತುದಾರರ 235 ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಸಹಮತಿಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಕೆಯಾಗಿದೆ.
ಉ)	ಯಾವ ಕ್ರೀಡೆಯನ್ನು ಕರ್ನಾಟಕದ ಮೇರು ಕ್ರೀಡೆಯೆಂದು ಪರಿಗಣಿಸಲಾಗಿದೆ; ಯಾವ ಕಾರಣಕ್ಕಾಗಿ? (ವಿವರ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಯಾವುದೇ ಕ್ರೀಡೆಯನ್ನು ಮೇರು ಕ್ರೀಡೆ ಎಂದು ಪರಿಗಣಿಸಲಾಗಿಲ್ಲ.

ವೈಎಸ್‌ಡಿ/ಇಬಿಬಿ/198/2021

(ಡಾ|| ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.